ಶಿಶು ಅಭಿವೃದ್ಧಿಯೋಜನಾಧಿಕಾರಿಗಳು ಮೇಲ್ವಿಚಾರಕಿಯರ ವಲಯ ಬದಲಾವಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕೆಲವು ಮೇಲ್ವಿಚಾರಕಿಯರು 5–6 ವರ್ಷಗಳಿಂದ ಒಂದೇ ವಲಯಗಳಿಂದ ಕಾರ್ಯ ನಿರ್ವಹಿಸುತ್ತಿದ್ದುದರಿಂದ ಹಾಗೂ ಅವರ ಮೇಲೆ ದೂರುಗಳು ಬಂದಿದ್ದರಿಂದ ಅವರ ವಲಯಗಳನ್ನು ಬದಲಾಯಿಸಿದ್ದು, ಬಿಜಾಪುರ ಜಿಲ್ಲಾ ಸಹಾಯಕ ನಿರ್ದೇಶಕರ ದಿ:28–02–2009 ರ ಸೂಚನೆಯಂತೆ ಆದೇಶವನ್ನು ರದ್ದು ಪಡಿಸಲಾಗಿದೆ.

ಆ) ಬಂದಿದ್ದಲ್ಲಿ, ಈ ಮಕ್ಕಳಿಗೆ ಮತ್ತು ತಾಯಂದಿರಿಗೆ ಆಹಾರ ಸಮರ್ಪಕವಾಗಿ ವಿತರಣೆಯಾಗುತ್ತಿಲ್ಲದಿರುವುದು ಮತ್ತು ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ನೀಡಲಿಕ್ಕೆ ಹಣ ಕೇಳುತ್ತಿರುವುದು ನಿಜವೇ;

ಇಲ್ಲ.

ಇ) ಅದನ್ನು ಸರಿಪಡಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ;

ದಿ:3–11–2007 ರ ಆದೇಶ ಸಂ.ಮಮಇ 235 ಐಸಿಡಿ 2007ರಲ್ಲಿ ಗ್ರಾಮೀಣ ಹಾಗೂ ನಗರದ ಪ್ರದೇಶದ ಅಂಗನವಾಡಿಗಳ ಉತ್ತಮ ಕಾರ್ಯ ನಿರ್ವಹಣೆಗಾಗಿ ಬಾಲವಿಕಾಸ ಸಮಿತಿಯನ್ನು ರಚಿಸಿದ್ದು, ಅಂಗನವಾಡಿಗಳಿಗೆ ಆಹಾರ ಸರಬರಾಜು ಆಗುವ ವೇಳೆಯಲ್ಲಿ ಸಮಿತಿಯ ಇಬ್ಬರು ಸದಸ್ಯರು ಹಾಜರಿದ್ದು, ಗುಣಮಟ್ಟ ಸರಿಯಾಗಿ ಇರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕೆಂದು ಮಾರ್ಗಸೂಚಿಯನ್ನು ನೀಡಲಾಗಿದೆ. ಆಹಾರ ಸಮರ್ಪಕವಾಗಿ ವಿತರಣೆಯಾಗುತ್ತಿಲ್ಲದಿರುವ ಹಾಗೂ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ನೀಡಲು ಹಣ ಕೇಳುತ್ತಿರುವ ಪ್ರಕರಣಗಳ ಬಗ್ಗೆ ಯಾವುದೇ ದೂರು ಬಂದಿಲ್ಲ. ಈ ಬಗ್ಗೆ ಯಾವುದೇ ದೂರು ಬಂದಲ್ಲಿ ಅಧಿಕಾರಿಗಳ ಮಟ್ಟದಲ್ಲಿ ತಕ್ಷಣವೇ ತನಿಖೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಈ) ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕೂಡಲೇ ಕ್ರಮ ಕೈಗೊಳ್ಳಲಾಗುವುದೆ?

ಪ್ರಧಾನ ಕಚೇರಿಯಿಂದ ನೋಡಲ್ ಅಧಿಕಾರಿಗಳು ರಾಜ್ಯ ಮಟ್ಟದಲ್ಲಿ ಸ್ವೀಕರಿಸಿದ ದೂರುಗಳನ್ನು ಪರಿಶೀಲಿಸಿ ವರದಿ ನೀಡುತ್ತಾರೆ. ನಂತರ ಯಾರಾದರೂ ಸಿಬ್ಬಂದಿಗಳು ತಪ್ಪಿತಸ್ಥರೆಂದು ಕಂಡು ಬಂದಲ್ಲಿ ಅಂತಹ ಸಿಬ್ಬಂದಿಯ ಮೇಲೆ ಇಲಾಖೆಯಿಂದ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

160 ಡಾ: ಬಗಲಿ ಸರ್ವಭೌಮ ಸಹಗೌಡ (ಇಂಡಿ)
ಶಿವರಾಜ್ ಎಸ್. ತಂಗಡಗಿ(ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)

ಅ) 2006–07ರಲ್ಲಿ ಇಂಡಿ ಮತಕ್ಷೇತ್ರದ ರೈತರಿಗೆ ಕಬ್ಬಿನ ಪರಿಹಾರ ನೀಡಲು ಸರ್ಕಾರಿ ಆದೇಶವಿದ್ದರೂ ನೀಡದಿರಲು ಕಾರಣವೇನು?

2006–07ನೇ ಸಾಲಿಗೆ ಬಿಜಾಪುರ ಜಿಲ್ಲೆಯ ರೈತರಿಗೆ ಕಬ್ಬಿನ ಪರಿಹಾರ ನೀಡುವ ಸಂಬಂಧ 2009–10ನೇ ಸಾಲಿನಲ್ಲಿ 1,21,78,724/– ರೂ.ಗಳ ಸಾಗಾಣಿಕೆ ಸಹಾಯಧನವನ್ನು ದಿನಾಂಕ 02.07.2009ರಂದು ಬಿಡುಗಡೆ ಮಾಡಲಾಗಿದೆ. ಬಾಕಿ ಉಳಿದ ಪರಿಹಾರಧನವನ್ನು ಬಿಡುಗಡೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

ಆ) ಪರಿಹಾರ ಧನ ವಿತರಿಸಲು ಸರ್ಕಾರಕ್ಕೆ ಇರುವ ತೊಂದರೆಗಳಾದರೂ ಏನು?

ಬಾಕಿ ಉಳಿದ ಪರಿಹಾರಧನ ಬಿಡುಗಡೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

ಇ) ಪರಿಹಾರ ಧನದ ಚೆಕ್ಕುಗಳನ್ನು ಎಂದು ವಿತರಿಸಲಾಗುವುದು?

ಬಾಕಿ ಉಳಿದ ಪರಿಹಾರಧನ ಬಿಡುಗಡೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

148 ಶ್ರೀ ಸಿದ್ದು ಸವದಿ

ಅ) ರಾಜ್ಯದಲ್ಲಿ ಶೇ.3ರ ಬಡ್ಡಿಯಂತೆ ವಿತರಿಸಿದ ಸಾಲವೆಷ್ಟು? ಯಾವ ಉದ್ದೇಶಕ್ಕಾಗಿ ವಿತರಿಸಲಾಗಿದೆ?

2008–09ನೇ ಸಾಲಿನಲ್ಲಿ ಸಹಕಾರಿ ಸಂಸ್ಥೆಗಳ ಮೂಲಕ ರಾಜ್ಯದ ರೈತರು, ಮೀನುಗಾರರು ಮತ್ತು ನೇಕರರಿಗೆ ಶೇ.3ರ ಬಡ್ಡಿದರದಲ್ಲಿ ಒಟ್ಟು ರೂ.3,60,755.62 ಲಕ್ಷ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ವಿತರಿಸಲಾಗಿದೆ. ಈ ಸಾಲವನ್ನು ಕೃಷಿ, ಮೀನುಗಾರಿಕೆ ಹಾಗೂ ನೇಕಾರಿಕೆ ಉದ್ದೇಶಗಳಿಗೆ ವಿತರಿಸಲಾಗಿರುತ್ತದೆ.

ಆ) ಹಾಗಿದ್ದಲ್ಲಿ, ನೇಕಾರರಿಗೆ ಒದಗಿಸಿದ ಸಾಲವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಸಹಕಾರಿ ಸಂಸ್ಥೆಗಳು ನೇಕಾರರಿಗೆ ಒಟ್ಟು ರೂ.3,057.62 ಲಕ್ಷ ಸಾಲವನ್ನು ವಿತರಿಸಿರುತ್ತವೆ. ಲಭ್ಯವಿರುವ ಮಾಹಿತಿಯ ಪ್ರಕಾರ ಕೆಳಕಂಡ ಜಿಲ್ಲೆಗಳಲ್ಲಿ ನೇಕಾರಿಕೆ ಸಾಲಗಳನ್ನು ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ಜಿಲ್ಲೆ	ಸಾಲದ ಮೊತ್ತ
1.	ಬೆಂಗಳೂರು ನಗರ ಜಿಲ್ಲೆ–2	278.28
2.	ತುಮಕೂರು	32.78
3.	ಬೆಳಗಾವಿ	466.15
4.	ಬಾಗಲಕೋಟೆ	1940.41
5.	ಕೊಪ್ಪಳ	5.00
	ಒಟ್ಟು	**3057.62**